ತಾರೀಖು 24ನೇ ಜೂನ್ 1890.

ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ತಾಲ್ಲೂಕುಗಳಿಂದ ಈ ಕೆಳಗೆ ಅದರದರ ಬಾಜೂವಲ್ಲಿ ಕಂಡ ಕೋಠಿಗಳಿಗೆ ಜಿಲ್ಲ ಬಣಸಂದಲ್ ಮರಗಳನ್ನು ಬೇರು ಸಹಿತವಾಗಿ ಭೂಮಿಯಿಂದ ಕೀಳಿಸಿ ತಯಾರ್ಮಾಡಿಸಿ ರವಾನೆ ಮಾಡತಕ್ಕ ಬಗ್ಗೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.

2. ತಮಾಂ ದರಖಾಸ್ತುಗಳ ಮೇಲೆ "ಬಣ ಸಂದಲ್ ಮರಗಳನ್ನು ಬೇರು ಸಹಿತವಾಗಿ ಭೂಮಿಯಿಂದ ಕೀಳಿಸಿ ತಯಾರ್ಮಾಡಿಸಿ ಕೋಠಿಗೆ ರವಾನಿಸತಕ್ಕ ಬಗ್ಗೆ ದರಖಾಸ್ತು" ಎಂಬದಾಗಿ ವಿಳಾಸ ಬರಿಯಬೇಕು.

3. ಇಂಥಾ ದರಖಾಸ್ತುಗಳು 1890ನೇ ಇಸವಿ ಜುಲೈ ತಾರೀಖು 20ರ ವರಿಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟುಗಳ ಅಸಿಸ್ಟೆಂಟ್ ಕಂಸರ್ವೇಟರ್ ಸಾಹೆಬರವರಿಂದ ತೆಗದುಕೊಳ್ಳಲ್ಪಡುವವು.

4. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತನ್ನ ದರಖಾಸ್ತು ಮಂಜೂರಾದ ಬಗ್ಗೆ ತಾನು ಬರಬುಕೊಡುವ ಮುಚ್ಚಳಿಕೆ ಮೇರೆ ಕ್ರಮವಾಗಿ ನಡದುಕೊಳ್ಳುವ ಬಗ್ಗೆ ಜಾಮೀನು ತರೀಕ್ ತಾಲ್ಲೂಕು 1ಕ್ಕೆ 50ರ ಲಾಗಾಯತು 100 ರೂಪಾಯಿಗಳ ವರಿಗೆ ಗವರ್ಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಡತಕ್ಕದ್ದು.

5. ಇಂಥಾ ಸಂದಲ್ ತಯಾರಿಯು ಸಂದಲ್ ಮಣಿಗಾರ್ರುಗಳ ತಿಳುವಳಿಕೆ ಬಗ್ಗೆ ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ ಸಾಹೆಬರವರಿಂದ ಫಾಯಿಷ್ ಆಗಿರುವ ಸಂದಲ್ ಮ್ಯಾನೂಲ್‌ನಲ್ಲಿ ಕಂಡಪ್ರಕಾರ ಇರಬೇಕು.

6. ದರಖಾಸ್ತುದಾರರು ಮೇಲ್ಕಂಡ ಕೆಲಸವನ್ನು ನಡಿಸುವದಕ್ಕಾಗಿ ಬಂದು ಅಥವಾ ಜಾಸ್ತಿ ತಾಲ್ಲೂಕುಗಳನ್ನು ಅಪೇಕ್ಷಿಸಿದಲ್ಲಿ ಈ ಕೆಳಗೆ ಕಂಡಪೇರೆ ಬಂದೊಂದು ತಾಲ್ಲೂಕುಗಳಲಿ ಅಥವಾ ಅದರ ಬಂದು ಭಾಗಕ್ಕಾಗಲಿ ಬೇರೆಬೇರೆ ದರಖಾಸ್ತುಗಳನ್ನು ರವಾನಿಸಬೇಕು.

7. ಪ್ರತಿ ಒಬ್ಬ ದರಖಾಸ್ತುದಾರನು ತನ್ನ ದರಖಾಸ್ತಿನಲ್ಲಿ ಈ ಕೆಳಗೆ ಕಂಡ ತಾಲ್ಲೂಕುಗಳಿಂದಲಾಗಲಿ ಅದರ ಬಂದುಭಾಗದಿಂದಲಾಗಲಿ ಮರಗಳನ್ನು ಬೇರುಸಹಿತ ಕೀಳಿಸಿ ತಯಾರ್ಮಾಡಿಸಿ ಕೋಠಿಗೆ ರವಾನೆ ಮಾಡಲು ಒಪ್ಪಿಕೊಳ್ಳುವ ಕಮ್ಮಿ ದರವನ್ನು ದರಖಾಸ್ತಿನಲ್ಲಿ ನಮೂದಿಸಬೇಕು.

8. ಈ ಮೇರೆ ಕಂಟ್ರಾಕ್ಟುದಾರ್ರಿಂದ ಕೋಠಿಗೆ ಕಳುಹಿಸಲ್ಪಡುವ ಸಂದಲ್‌ನಲ್ಲಿ ಇಲಾಖಾ ಹುಕುಂ ಮೇರೆ ಶೇಕಡಾ 10 ರ್ಟ ಪ್ರಕಾರ ಅರವಾಸೀ ಮತ್ತು ಕಮ್ಮಿ ಭರ್ತಿಗಾಗಿ ವಜಾ ಮಾಡಲ್ಪಡುವದು.

9. ಫಾರೆಸ್ಟ್ ಅಸಿಸ್ಟೆಂಟ್ ಕಂಸರ್ವೇಟರ್ ಸಾಹೆಬರವರು ಕಮ್ಮಿ ದರದ ಅಥವಾ ಮತ್ಯಾವ ದರಖಾಸ್ತುಗಳನ್ನಾಗಲಿ ಅಂಗೀಕರಿಸುವದಕ್ಕೂ ಮತ್ತು ತಿರಸ್ಕರಿಸಿದ್ದಕ್ಕೆ ಯಾವ ಕಾರಣಗಳನ್ನು ಕೊಡುವದಕ್ಕೂ ಬದ್ಧರಾಗಿರುವದಿಲ್ಲ. ಇಂಥಾ ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟು ಪೆಪ್ಪುಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಒಳಪಟ್ಟಿದೆ.

10. ಉದ್ದೇಶಿಸುವ ಕಂಟ್ರಾಕ್ಟುದಾರರಿಗೆ ಅಪೇಕ್ಷಿತವಾದ ಇನ್ನೂ ಜಾಸ್ತಿ ಸಂಗತಿಗಳನ್ನು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಅಸಿಸ್ಟೆಂಟ್ ಕಂಸರ್ವೇಟರ್ ಸಾಹೆಬರವರ ಹೆಡ್ ಕ್ವಾರ್ಟರ್ ಆಫಿಸಿನಲ್ಲಾಗಲಿ ಅಥವಾ ಸರಕ್ಯೂಟ್ ವೊಕ್ಕಾಂಗಳಲ್ಲಾಗಲಿ ತಿಳಿದುಕೊಳ್ಳಬಹುದು.

11. ದರಖಾಸ್ತುದಾರರು ಇಷ್ಟವಿದ್ದರೆ 1890ನೇ ಇಸವಿ ಜುಲೈ 21ನೇ ತಾರೀಖು ಸೋಮವಾರ ದಿವಸ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಅಸಿಸ್ಟೆಂಟ್ ಕಂಸರ್ವೇಟರವರ ಆಫಿಸಿಗೆ ಬಂದು ಹಾಜರಾಗಬಹುದು, ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರರು ಜುಲೈ 25ನೇ ತಾರೀಖಿನ ಒಳಗಾಗಿ ಮುಚ್ಚಳಿಕೆಯನ್ನೂ ಬರಬುಕೊಡಬೇಕಲ್ಲದೆ ತೇವಣಿಯನ್ನು ಸಹ ಕಟ್ಟಬೇಕು.

ತಾಲ್ಲೂಕು ಹೆಸರು.	ಕೋಠಿ ಹೆಸರು.	ಗೊತ್ತುಮಾಡಲ್ಪಟ್ಟ ಮೊತ್ತ.		ಕಾಲ.
1. ಮೈಸೂರು	ಶ್ರೀರಂಗಪಟ್ಟಣದ ಕೋಠಿ	50	ರ್ಟ	1890ನೇ ಇಸವಿ ಅಕ್ಟೋಬರ್ 15ನೇ ತಾರೀಖಿಗೆ ಮುಂಚೆ
2. ಶ್ರೀರಂಗಪಟ್ಟಣ	ಡಿಟೋ	25	ಡಿಟೋ	ಡಿಟೋ
3. ತಿರುಮಕೂಡ್ಲು ನರಸೀಪುರ	ಡಿಟೋ	25	ಡಿಟೋ	ಡಿಟೋ
4. ಚಾಮರಾಜನಗರ	ಡಿಟೋ	75	ಡಿಟೋ	ಡಿಟೋ
5. ನಂಜನಗೂಡು	ಡಿಟೋ	50	ಡಿಟೋ	ಡಿಟೋ
6. ಗುಂಡ್ಲುಪೇಟೆ	ಡಿಟೋ	75	ಡಿಟೋ	ಡಿಟೋ
7. ಹೆಗ್ಗಡದೇವನಕೋಟೆ (ಕಪಿಲಾನದಿಗೆ ದಕ್ಷಿಣಭಾಗ)	ಡಿಟೋ	75	ಡಿಟೋ	ಡಿಟೋ
8. ಅತ್ತಿಕುಪ್ಪ	ಡಿಟೋ	50	ಡಿಟೋ	ಡಿಟೋ
9. ನಾಗಮಂಗಲ	ಡಿಟೋ	25	ಡಿಟೋ	ಡಿಟೋ
10. ಮಂಡ್ಯ	ಡಿಟೋ	25	ಡಿಟೋ	ಡಿಟೋ
11. ಮಳವಳ್ಳಿ	ಡಿಟೋ	25	ಡಿಟೋ	ಡಿಟೋ
12. ಹುಣಸೂರು	ಹುಣಸೂರು ಕೋಠಿ	200	ಡಿಟೋ	ಡಿಟೋ
13. ಯಡತೊರೆ	ಡಿಟೋ	150	ಡಿಟೋ	ಡಿಟೋ
14. ಹೆಗ್ಗಡದೇವನಕೋಟೆ (ಕಪಿಲಾನದಿಗೆ ಉತ್ತರಭಾಗ)	ಡಿಟೋ	150	ಡಿಟೋ	ಡಿಟೋ

ಬಿ. ರಾಮಸ್ವಾಮಯ್ಯರ್,
ಅಫಿಷಿಯೇಟಿಂಗ್ ಅಸಿಸ್ಟೆಂಟ್ ಕಂಸರವೇಟರ್.